

## 22. ಸರ್ಕಾರಿ ಪ್ರೌಢಶಾಲೆ ಹೊಸೂರು ಗುಡ್ಡೇಕೇರಿ.. ತೀರ್ಥಹಳ್ಳಿ..

*********************"*************

ಸರ್ಕಾರಿ ಪ್ರೌಢಶಾಲೆ ಹೊಸೂರು ಗುಡ್ಡೇಕೇರಿ, ತೀರ್ಥಹಳ್ಳಿ ತಾಲೂಕು ಇಲ್ಲಿ ಸಮುದಾಯದ ಸಹಕಾರದಿಂದ 2016–17 ನೇ ಸಾಲಿನಲ್ಲಿ ಸ್ಮಾರ್ಟ್ ಕ್ಲಾಸ್ ಅಳವಡಿಸಲಾಗಿದೆ. ಸಾಂಪ್ರದಾಯಿಕ ಬೋಧನೆ ಜೊತೆಗೆ ಮಕ್ಕಳ ಕಲಿಕೆಯ ಕೆಲವು ತೊಡಕುಗಳನ್ನು ನಿವಾರಿಸಲು ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಇಂಗ್ಲೀಷ್ ಪಠ್ಯ ವಸ್ತುವಿರುವ ಪೆನ್‌ಡ್ರೈವನ್ನು, ಲರ್ನ್ ಇಟ್ ಸಂಸ್ಥೆಯಿಂದ ಖರೀದಿಸಿ ಶಿಕ್ಷಕರೇ ಪಠ್ಯವಸ್ತುವಿನ ಬಗ್ಗೆ ಪಿಪಿಟಿ ತಯಾರಿಸಿ, ಪಠ್ಯವಸ್ತುವಿನ ಇತರೆ ಸಿಡಿಗಳನ್ನು ಬಳಸಿ ಟೆಲಿ ಎಡುಕೇಶನ್ನಿನ ನಂತರದ ಅವಧಿಯಲ್ಲಿ ಶಿಕ್ಷಕರು ತರಗತಿಯನ್ನು ನಡೆಸುತ್ತಿದ್ದಾರೆ. 2017 ರಲ್ಲಿ ಇಂಗ್ಲೆಂಡ್‌ನ ಜಾನೆಟ್ ಎಸ್ ಕ್ಲಾರ್ಕ್ ಹಾಗೂ ರಿಚರ್ಡ್ ಕ್ಲಾರ್ಕ್ ಭೇಟಿಯಾಗಿ ಶಾಲೆಗೆ ಅಗತ್ಯವಾದ ರೂ.30000/– ಬೆಲೆಯ ಪ್ರೊಜೆಕ್ಟರ್ ಕೊಡುಗೆಯಾಗಿ ಕೊಟ್ಟರು. ಇದರಿಂದ ಸ್ಮಾರ್ಟ್‌ಕ್ಲಾಸ್ ನಡೆಸಲು ಅನುಕೂಲವಾಯಿತು. ಮಲ್ಟಿ ಮೀಡಿಯಾ ಉಪಯೋಗಿಸಿ ಪಠ್ಯ ಬೋಧನೆ ಮಾಡುತ್ತಿರುವುದರಿಂದ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುವುದು ಕಡಿಮೆಯಾಗಿದೆ ಹಾಗೂ ಕಲಿಕೆಯನ್ನೂ ದೃಢಗೊಳಿಸುತ್ತಿದೆ. ನಾವಿನ್ಯಯುತ ಚಟುವಟಿಕೆ ಮೂಲಕ ಮಕ್ಕಳು ಸಂತಸವಾಗಿ ಕಲಿಕೆಯಲ್ಲಿ ತೊಡಗಿದ್ದಾರೆ. ಶಿಕ್ಷಕರ ದೃಢಸಂಕಲ್ಪ ಹಾಗೂ ಸಮುದಾಯದ ಸಹಕಾರ, ವಿದ್ಯಾರ್ಥಿಗಳ ಆಸಕ್ತಿಯಿಂದ ಶಾಲಾ ಮಕ್ಕಳು ತಂತ್ರಜ್ಞಾನದ ಸದುಪಯೋಗ ಪಡೆಯುತ್ತಿದ್ದಾರೆ. ಪಠ್ಯವನ್ನು ಕ್ರಿಯಾ ಶೀಲ ಚಟುವಟಿಕೆಗಳನ್ನು ಅಳವಡಿಸಿ ಬೋಧಿಸಲಾಗುತ್ತಿದೆ. ರಾಷ್ಟ್ರೀಯ ಹಬ್ಬಗಳು, ನಾಡ ಹಬ್ಬದ ಮಹತ್ವದ ಬಗ್ಗೆ ಹಾಗೂ ರಾಷ್ಟ್ರ ನಾಯಕರ ಕುರಿತ ಸಾಕ್ಷ್ಯ ಚಿತ್ರ, ಯೂಟ್ಯೂಬ್ ಕ್ಲಿಪ್‌ಗಳ ಹಾಗೂ ಪಿಪಿಟಿಗಳ ಮೂಲಕ ಮಕ್ಕಳಿಗೆ ಪ್ರಮುಖ ಮಾಹಿತಿಯನ್ನು ನೀಡಲಾಗುತ್ತಿದೆ.

ವಿದ್ಯಾರ್ಥಿಗಳನ್ನು ಉತ್ತಮ ನಾಗರೀಕರನ್ನಾಗಿಸಿ ಸಮಾಜಕ್ಕೆ ಕೊಡುವ ಗುರುತರವಾದ ಜವಾಬ್ದಾರಿ ಶಿಕ್ಷಕರ ಮೇಲಿರುವುದನ್ನು ಅರಿತು ವಿದ್ಯಾರ್ಥಿಗಳ ಸರ್ವಾಂಗೀಣ ಉನ್ನತಿಗೆ ಶ್ರಮಿಸಲಾಗುತ್ತಿದೆ. ನಾಡು, ದೇಶ, ಭಾಷೆ, ಕಲೆ, ಸಂಸ್ಕೃತಿ ಹಾಗೂ ಸಾಮಾನ್ಯ ಜ್ಞಾನ ವಿಷಯದಲ್ಲಿ ಪ್ರಬುದ್ಧರನ್ನಾಗಿಸುವುದು ಶಿಕ್ಷಕರ ಗುರಿಯಾಗಿದೆ. ಇಲ್ಲಿನ ಶಿಕ್ಷಕ ಸಮುದಾಯವು ಇತರರಿಗೆ ಪ್ರೇರಣೆಯಾಗಿದ್ದಾರೆ ಇದಲ್ಲದೆ ಕಂಪ್ಯೂಟರ್ ತರಗತಿಯನ್ನು ನಡೆಸಲಾಗುತ್ತಿದೆ. ಸದ್ಯ ಲಭ್ಯವಿರುವ ಮೂರು ಲ್ಯಾಪ್‌ಟಾಪ್ ಮೂಲಕ ತರಗತಿ ನಡೆಸಲಾಗುತ್ತಿದ್ದು, ಶಾಲೆಯನ್ನು ದತ್ತು ತೆಗೆದುಕೊಂಡಿರುವ

ಕೇರ್ ವರ್ಕ್ ಫೌಂಡೇಷನ್ ಬೆಂಗಳೂರು ಇವರ ಸಹಕಾರದಲ್ಲಿ ಹದಿನೈದು ಕಂಪ್ಯೂಟರ್‌ಗಳು ಶಾಲೆಗೆ ಸದ್ಯದಲ್ಲೇ ಸರಬರಾಜಾಗಲಿದೆ.

ಇದರೊಂದಿಗೆ ಶಾಲೆಯಲ್ಲಿ ಆಕರ್ಷಕ ತೆರೆದ ಗ್ರಂಥಾಲಯ ಕೊಠಡಿಯನ್ನು ರೂಪಿಸಿದ್ದು ಮಕ್ಕಳು ತಮಗೆ ಆಸಕ್ತಿಯಿರುವ ಪುಸ್ತಕವನ್ನು ಆಯ್ದುಕೊಳ್ಳಬಹುದಾಗಿದೆ. ಉತ್ತಮ ಗಾಳಿ ಬೆಳಕು ಆಸನದ ವ್ಯವಸ್ಥೆ ಕಲ್ಪಿಸಿ ಪುಸ್ತಕ ಓದಿದ ನಂತರ ಅಭಿಪ್ರಾಯ ವ್ಯಕ್ತಪಡಿಸಲು ಒಂದು ಪ್ರತ್ಯೇಕ ಪುಸ್ತಕವನ್ನು ಅಲ್ಲಿ ಇಡಲಾಗಿದೆ. ಹಾಗೆಯೇ ಓದಿದ ಪುಸ್ತಕದ ಬಗ್ಗೆ ಅಭಿಪ್ರಾಯವನ್ನು ನೋಟ್ ಪುಸ್ತಕದಲ್ಲಿ ಬರೆದುಕೊಳ್ಳಲಾಗುತ್ತಿದೆ. ಪಾಕ್ಷಿಕವಾಗಿ 'ನಾನು ಓದಿದ ಪುಸ್ತಕ' ಎಂಬ ಕಾರ್ಯಕ್ರಮದಡಿ ಚಿಂತನ ಮಂಥನ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ತಾವು ಓದಿದ ಪುಸ್ತಕ ಹಾಗೂ ಅದರಲ್ಲಿರುವ ವಿಷಯ ಜ್ಞಾನದ ಬಗ್ಗೆ ಸಹಪಾಠಿಗಳೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. ಪ್ರತಿ ನಿತ್ಯ ಪ್ರಜಾವಾಣಿ ಹಾಗೂ ಆಂಗ್ಲ ಭಾಷೆಯ ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳನ್ನು ಶಾಲೆಗೆ ತರಿಸಲಾಗುತ್ತಿದ್ದು, ಪ್ರತಿ ನಿತ್ಯ ಪತ್ರಿಕೆಯ ಪ್ರಮುಖಾಂಶಗಳನ್ನು ಪ್ರಾರ್ಥನೆಯ ಅವಧಿಯಲ್ಲಿ ಓದಿಸಲಾಗುತ್ತಿದೆ. ಇದರ ಬಗ್ಗೆ ರಸ ಪ್ರಶ್ನೆ ಸ್ಪರ್ಧೆಯನ್ನು ಪಾಕ್ಷಿಕವಾಗಿ ಹಮ್ಮಿಕೊಳ್ಳಲಾಗುತ್ತಿದೆ. ಇದರಿಂದ ಮಕ್ಕಳಲ್ಲಿ ದಿನಪತ್ರಿಕೆ ಓದುವ ಹವ್ಯಾಸವನ್ನು ಬೆಳಸಲಾಗುತ್ತಿದೆ. ಒಟ್ಟಿನಲ್ಲಿ ಮಾದರಿಶಾಲೆಯಾಗಿ ಮಾಡುವಲ್ಲಿ ಶಿಕ್ಷಕರು, ಸಮುದಾಯ ಪ್ರಯತ್ನಿಸುತ್ತಿದೆ. ಈ ಲೇಖನ ಇತರರಿಗೂ ಪ್ರೇರಣೆಯಾಗಲಿ ಎಂದು ಆಶಿಸುತ್ತೇವೆ.










" ಒಂದು ಉತ್ತಮ ಸಮವಸ್ತ್ರ, ಆ ಶಾಲೆಯ ಸಮಗ್ರ ಪ್ರಗತಿಯ ಮೇಲೆ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ,ಜೊತೆಗೆ ಮಗುವಿನ ಆತ್ಮ ಸ್ಥೈರ್ಯವನ್ನು ಹೆಚ್ಚಿಸಿ,ಅವನಲ್ಲಿರುವ ಕೀಳಿರಿಮೆ ಭಾವನೆಯನ್ನು ಹೊಗಲಾಡಿಸಿ, ಸಧೃಢ ಮತ್ತು ಸೃಜನಶೀಲ ಕಲಿಕೆಗೆ ಪ್ರೇರಣೆ ನೀಡುವುದರ ಮೂಲಕ,ಒಂದು ಶ್ರೇಷ್ಠ ಪ್ರತಿಭೆಯನ್ನು ಜಗತ್ತಿಗೆ ಪರಿಚಯಿಸಲು ಸಹಕಾರಿಯಾಗುತ್ತದೆ. " ನೂತನ ಸಮವಸ್ತ್ರದ ರೂಪ ರೇಷು ಸಿದ್ದ ಪಡಿಸಿದ ಎಲ್ಲಾ ಶಿಕ್ಷಕ ಬಳಗಕ್ಕೆ, ಹೆಚ್ಚಿನ ಕಾಳಜಿ ವಹಿಸಿದ ಸಮಾಜ ಶಿಕ್ಷಕರಾದ ಶ್ರೀ ವೀರೇಶ್ ಸರ್, ಅವರಿಗೂ ...ಎಸ್ ಡಿ ಎಮ್ ಸಿ ಬಳಗಕ್ಕೂ, ಪೋಷಕರಿಗೂ,ಮಕ್ಕಳಿಗೂ ನಮ್ಮ ಅಭಿನಂದನೆಗಳು. " ಪ್ರಯತ್ನ ಮಾಡದಿರುವುದೆ, ನಮ್ಮ ನಿಜವಾದ ಸೋಲು...ನಮ್ಮ ಪ್ರಯತ್ನಗಳು ನಿರಂತರ.. "






ತೀರ್ಥಹಳ್ಳಿಯ ಸರ್ಕಾರಿ ಬಾಲಿಕಾ ಪ್ರೌಢಶಾಲೆಯ ಕು. ಮೇಘನಾ ಇವರು ಸೃಜನಶೀಲ ಬರವಣಿಗೆ (ಕಥೆ,ಕವನ,ಪ್ರಬಂಧ) ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮಸ್ಥಾನ ಪಡೆದು ಕಲಾಶ್ರೀ ಗೌರವ ಪಡೆದು ತೀರ್ಥಹಳ್ಳಿ ತಾಲ್ಲೂಕಿಗೆ ಕೀರ್ತಿ ತಂದಿರುತ್ತಾಳೆ. ತರಬೇತಿ ನೀಡಿದ ಶಿಕ್ಷಕ ಬಳಗಕ್ಕೂ ಹಾಗೂ ಉಪ ಪ್ರಾಂಶುಪಾಲರಾದ ಶ್ರೀ ಗಿರಿರಾಜ್ ಸರ್ ಅವರಿಗೂ ಕು|| ಮೇಘನಾ ಜಿ ಎಂ ಇವರಿಗೂ ನಮ್ಮ ಸರ್ಕಾರಿ ಪ್ರೌಢಶಾಲೆ ಹೊಸೂರು-ಗುಡ್ಡೇಕೇರಿಯ ಪರವಾಗಿ ಪ್ರೀತಿಯ ಅಭಿನಂದನೆಗಳು

ನಮ್ಮ ಸರ್ಕಾರಿ ಶಾಲೆಯಲ್ಲಿ ಕಳೆದ ಒಂದು ವರ್ಷದಿಂದ **Smart class** ಮೂಲಕ ಶಿಕ್ಷಣ ನೀಡುವ ವಿನೂತನ ಭೋಧನಾ ವಿಧಾನವನ್ನು ಪ್ರಾರಂಭ ಮಾಡಿದ್ದೇವೆ. ನಮ್ಮ ಶಾಲೆಯಲ್ಲಿ 3 ರೀತಿಯ ಭೋಧನೆ ಇದೆ :

* ತರಗತಿ ಕೋಣೆಯಲ್ಲಿ ಸಾಂಪ್ರದಾಯಕ ಭೋಧನೆ
*projector ಮೂಲಕ ನಾವಿನ್ಯತೆಯ ಭೋಧನೆ (ನಮ್ಮಲ್ಲಿ ಪಠ್ಯಕ್ಕೆ ಅನುಗುಣವಾದ ಮಾಹಿತಿಗಳು Pendrive, ppt, CD ಯಲ್ಲಿ ಲಭ್ಯ ಇವೆ )
* Youtube ನಲ್ಲಿರುವ ಪಠ್ಯಕ್ಕೆ ಸಂಬಂಧಿಸಿದ live ಕ್ಲಾಸ್ ಗಳನ್ನು ಮಕ್ಕಳಿಗೆ ನೇರವಾಗಿ ತೋರಿಸುವ ಪ್ರಯತ್ನ

ಈ ಮೂರು ವಿಧಾನಗಳು ಮಕ್ಕಳ ಪರಿಣಾಮಕಾರಿ ಕಲಿಕೆಗೆ ಸಹಕಾರಿಯಾಗಿವೆ. ನಾವು ಈ ಯೋಜನೆಗೆ ಪೋಷಕರಿಂದ ಯಾವುದೇ ಒಂದು ರೂಪಾಯಿ ಶುಲ್ಕವನ್ನು ಸ್ವೀಕರಿಸಿಲ್ಲ.ನಮ್ಮ ಬೆನ್ನ ಹಿಂದೆ ನಿಂತು ಪ್ರೋತ್ಸಾಹಿಸಿದ ಎಸ್ ಡಿ ಎಂ ಸಿ, ಹಿರಿಯ ವಿದ್ಯಾರ್ಥಿಗಳಿಗೂ , ಜನಪ್ರತಿನಿಧಿಗಳ ಬಳಗಕ್ಕೂ ಹಾಗೂ ವಿಶೇಷ ಸಹಕಾರ ನೀಡಿದ care work foundation ಮತ್ತು ನಮಗೆ projector ನೀಡಿ ಪ್ರೋತ್ಸಾಹಿಸಿದ ಇಂಗ್ಲೆಂಡಿನ Janet Stickler Clarke and Richard Clarke ದಂಪತಿಗಳಿಗೆ ಹಾಗೂ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ನಾವು ಅಭಾರಿಯಾಗಿದ್ದೇವೆ. ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತ Smart class ಶಿಕ್ಷಣ ದೊರೆಯಲು ಅವಿರತ ಶ್ರಮವಹಿಸಿದ ನಮ್ಮ ಶಿಕ್ಷಕ ಬಳಗ ಹಾಗೂ ಎಲ್ಲಾ ಮಕ್ಕಳಿಗೂ ನಮ್ಮ ಅಭಿನಂದನೆಗಳು. " ನಮ್ಮೊಳಗಿನ ಸದೃಢ ಇಚ್ಛಾಶಕ್ತಿಯೇ, ನಮ್ಮ ಸಾಧನೆಗಳಿಗೆ ಮೂಲ ಮಂತ್ರ ...."






"ಕೇವಲ ಅಂಕಗಳಿಕೆಯೇ ಶಿಕ್ಷಣವಲ್ಲ , ಮಗುವಿನ ಸರ್ವಾಂಗೀಣ ವಿಕಾಸವೇ ನಿಜವಾದ ಶಿಕ್ಷಣ" ಶಾಲೆಯಲ್ಲಿ ಈಗಾಗಲೇ ನಮ್ಮ ಶಿಕ್ಷಕರ ವಿಶೇಷ ಆಸಕ್ತಿ ಮತ್ತು ಶ್ರಮದ ಫಲವಾಗಿ ಮಗುವಿಗೆ ಓದು,ಬರಹ,ಅಭಿವ್ಯಕ್ತಿ,ನಾಯಕತ್ವ , ಕ್ರೀಡೆ,ತಂತ್ರಜ್ಞಾನ,ಪರಿಸರ ಕಾಳಜಿ, ಸ್ವಚ್ಚತೆ, ಯೋಗ, ಆತ್ಮರಕ್ಷಣೆ ಮಾಡಿಕೊಳ್ಳುವ ಬಗ್ಗೆ, **Spoken English** ಮತ್ತು **Spoken Hindi** ಕಲಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೇವೆ. ಮಗುವಿನ ಸುಪ್ತ ಮನಸ್ಸಿನಲ್ಲಿ ಅಡಗಿರುವ ಕಥೆ, ಕವನ, ಹಾಡು, ಬರಹ, ಚಿತ್ರಕಲೆ, ವ್ಯಂಗಚಿತ್ರ, ಇಂತಹ ಅನೇಕ ಸೃಜನಶೀಲ ಅದ್ಭುತ ಪ್ರತಿಭೆಗಳನ್ನು ಹೊರತರುವ ನಮ್ಮ ಹೊಸ ಪ್ರಯತ್ನವೇ **"ಶುಕ್ರವಾರದ ಸಂಭ್ರಮ"** ಸಾಹಿತಿಗಳು ,ಬರಹಗಾರರು ಮುಖಪುಸ್ತಕದ ಹಿರಿಯ ಗೆಳೆಯರಾದ ,ಶ್ರೀ ಮಂಜುನಾಥ್ ಉಡುಪ ತೈರೊಳ್ಳಿ ನಮ್ಮ ಮೊದಲ ಕಾರ್ಯಕ್ರಮದ ಆತಿಥಿಗಳಾಗಿ ಬಂದಿದ್ದು ನಮಗೆ ಖುಷಿಯಾಯಿತು. ನಮ್ಮ ಶಿಕ್ಷಕ ಬಳಗದ ಆಸಕ್ತಿ ಮತ್ತು ಮಕ್ಕಳ ಭಾಗವಹಿಸುವಿಕೆ ಯಿಂದ, ಮಕ್ಕಳ **"ಕಾವ್ಯ ವಾಚನ "** ಗೋಷ್ಠಿ ಅತ್ಯಂತ ಯಶಸ್ವಿಯಾಗಿ ನಡೆಯಿತು



ತೀರ್ಥಹಳ್ಳಿಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ .೪ನೇ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿ –3 ''ನನ್ನ ಪರಿಕಲ್ಪನೆಯ ಶಿಕ್ಷಣ'' ಎನ್ನುವ ವಿಷಯದಲ್ಲಿ **"ನನ್ನ ನಿರೀಕ್ಷೆಯ ಪಠ್ಯಕ್ರಮ"** ಕುರಿತು ಅದ್ಭುತವಾಗಿ ವಿಷಯ ಮಂಡನೆ ಮಾಡಿದ ನಮ್ಮ ಶಾಲೆಯ ಹೆಮ್ಮೆಯ ವಿದ್ಯಾರ್ಥಿ **ಆದಿತ್ಯ ಎಂ ಶೆಟ್ಟಿ** ಅವರಿಗೆ ಮತ್ತು ಸಹಕರಿಸಿದ ಎಲ್ಲರಿಗೂ ಹಾಗೂ ಅವಕಾಶ ನೀಡಿದ ಕನ್ನಡ ಸಾಹಿತ್ಯ ಪರಿಷತ್ ತೀರ್ಥಹಳ್ಳಿ ಸಮಸ್ತ ತಂಡಕ್ಕೂ ನಮ್ಮ ಅಭಿನಂದನೆಗಳು. ಮಕ್ಕಳ ಸುಪ್ತ ಮನಸ್ಸಿನಲ್ಲಿ ಅಡಗಿರುವ ಕಥೆ,ಕವನ,ಹಾಡು,ನೃತ್ಯ,ಮಾತುಗಾರಿಕೆ , ಕಲೆ–ಚಿತ್ರಕಲೆ,ವ್ಯಂಗಚಿತ್ರ ಚಿಂತನ–ಮಂಥನ, ಇನ್ನೂ ಅನೇಕ ಪ್ರತಿಭೆಗಳಿಗೆ ಶಾಲಾ ಹಂತದಲ್ಲಿ ಸೃಷ್ಟಿ ಯಾಗಿರುವ ಸೃಜನಶೀಲ ವೇದಿಕೆಯೇ ಶುಕ್ರವಾರದ_ಸಂಭ್ರಮ. ಗಾನ ಲಹರಿ ಯಲ್ಲಿ ನಮ್ಮ ಪುಟಾಣಿಗಳು ಮಧುರ ಗೀತೆಗಳು ನನ್ನ ಹೊಸ ಕಲ್ಪನೆಗೆ, ನಮ್ಮ ಬಳಗದ ಸಹಕಾರದಿಂದ ಅದ್ಭುತ ಆರಂಭ ಸಿಕ್ಕಿದೆ . .




ಕಳೆದ ವರ್ಷ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪುರಾತತ್ವ ಇಲಾಖೆಯ ವತಿಯಿಂದ ಜರುಗಿದ ಪ್ರಾಚ್ಯಪ್ರಜ್ಞೆ ರಸಪ್ರಶ್ನೆ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದಲ್ಲಿ ತೃತೀಯಸ್ಥಾನ ಗಳಿಸಿದ ನಮ್ಮ ಶಾಲೆಯ ನಯನ್ ಕುಮಾರ್ ಎನ್ ಎಸ್. ಸರ್ಕಾರಿ ಶಾಲೆಯ ಐತಿಹಾಸಿಕ ಸಾಧನೆಗೆ ಕಾರಣರಾದ

ವಿದ್ಯಾರ್ಥಿ ನಯನ ಕುಮಾರ್ ಹಾಗೂ ಇವರಿಗೆ ಅತ್ಯುನ್ನತ ತರಬೇತಿ ನೀಡಿದ ಸಮಾಜ ವಿಜ್ಞಾನ ಶಿಕ್ಷಕರಾದ ಶ್ರೀ ವೀರೇಶ್ ಟಿ ಇವರಿಗೂ ಸರ್ವರ ಪರವಾಗಿ ಅಭಿನಂದನೆಗಳು. 20/03/2018 ರಂದು ಮೈಸೂರಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಂದ ಪ್ರಶಸ್ತಿ ಸ್ವೀಕರಿಸಲಿದ್ದಾರೆ.




**"Dear friends..this is Manjunath (4th std )and Anusha (3rd std ) thier parents came from chitradurga to thirthalli for labour work... this kids left the school but i find out..i admitted to both of them to G h p s Agumbe given seat in Special free hostel with help of thier parents BEO sir And Crp Hallesh n teacher staff.... i am very happy bez Kids RE-JOIN the school...by MANJU BABU.. KES .. Special Nodel officer Agumbe ASHA KIRANA hostel"**